ಕರ್ನಾಟಕ ವಿಶ್ವವಿದ್ಯಾಲಯ
**KARNATAK UNIVERSITY**
**Accredited 'A' Grade by NAAC 2022**

**Karnatak University, Dharwad.** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ನಂ. ಕವಿವಿ/ಶಿಶಿಬಗ್ರಂಥಾಲಯ/2025/** 1046 **ದಿನಾಂಕ:** 23-6-25

## <u>ಸುತ್ತೋಲೆ</u>

**ವಿಷಯ:** Ph.D ವಿದ್ಯಾರ್ಥಿಗಳಿಗೆ ಶೋಧಗಂಗಾ ನಮೂನೆಯಲ್ಲಿ (Format) ಮಹಾಪ್ರಬಂಧದ CD ಯನ್ನು ಗ್ರಂಥಾಲಯದಿಂದ ಪರಿಶೀಲಿಸುವ ಕುರಿತು.

**ಉಲ್ಲೇಖ:** 1) ದಿನಾಂಕ 19-02-2025 ರಂದು ನಡೆದ ಗ್ರಂಥಾಲಯ ಸಲಹಾ ಮಂಡಳಿಯ ಸಭೆಯ ನಡುವಳಿ ಕಂಡಿಕೆ ಸಂಖ್ಯೆ 2.
2) ದಿನಾಂಕ 12-05-2025 ಮತ್ತು 13-05-2025 ರಂದು ನಡೆದ ಸಿಂಡಿಕೇಟ ಸಭೆ ಅನುಮೋದನೆ ಸಂಖ್ಯೆ 8.

Ph.D ಮಹಾಪ್ರಬಂಧಗಳನ್ನು ಶೋಧಗಂಗಾ Thesis Repository ನಲ್ಲಿ upload ಮಾಡುವದು ಕಡ್ಡಾಯ ಮಾಡಿರುತ್ತಾರೆ ಮತ್ತು ಅದಕ್ಕೆ ನಿರ್ದಿಷ್ಟ ನಮೂನೆಯನ್ನು ನೀಡಿರುತ್ತಾರೆ. Ph.D ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಮಹಾಪ್ರಬಂಧವನ್ನು ಶೋಧಗಂಗಾ Thesis Repository ಯಲ್ಲಿ ಸೇರಿಸಲು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಮಹಾಪ್ರಬಂಧವನ್ನು ಪ್ರಸ್ತುತಪಡಿಸಲಾಗಿದೆಯೇ ಎಂದು ಗ್ರಂಥಾಲಯದಿಂದ ಮಹಾಪ್ರಬಂಧದ CD ಯನ್ನು ಪರಿಶೀಲಿಸಿ ಅನುಮೋದಿಸಲಾಗುತ್ತದೆ. ಅದನ್ನು ಮಹಾಪ್ರಬಂಧದ ಜೊತೆ ವಿದ್ಯಾವಿಷಯಕ ವಿಭಾಗಕ್ಕೆ ಸಲ್ಲಿಸುತ್ತಾರೆ. ಪ್ರಸ್ತುತ ಕೆಲವು ಸಂಶೋಧನಾ ವಿದ್ಯಾರ್ಥಿಗಳು ಗ್ರಂಥಾಲಯದಿಂದ ಪರಿಶೀಲಿಸಿದ ನಂತರ ಕೂಡ ಮಹಾಪ್ರಬಂಧದಲ್ಲಿ ತಿದ್ದುಮಾಡಿ ಪುನಃ ಪರಿಶೀಲಿಸಲು ಕೋರಿ ಬರುತ್ತಿದ್ದಾರೆ. ಇದರಿಂದ ಈ ಮೊದಲು ಪರಿಶೀಲಿಸಿದ CD ಯನ್ನು Ph.D ವಿಭಾಗಕ್ಕೆ ಸಲ್ಲಿಸಿರುತ್ತಾರೆ. ಪುನಃ ಎರಡನೇ CD ಪರಿಶೀಲಿಸಿ ಅನುಮೋದಿಸಿದಲ್ಲಿ ಗೊಂದಲ ಉಂಟಾಗುತ್ತದೆ ಅಲ್ಲದೆ ಶೋಧಗಂಗಾ Repository ಯಲ್ಲಿ ಶೇಖರಣೆಗೊಂಡ ಪ್ರಬಂಧಕ್ಕೂ ಮತ್ತು ಮುದ್ರಿತ ಮಹಾಪ್ರಬಂಧದ ಪ್ರತಿಯಲ್ಲಿನ ವಿಷಯ ಮಂಡನೆಗೂ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ಕುರಿತು ದಿನಾಂಕ 19-02-2025 ರಂದು ನಡೆದ ಗ್ರಂಥಾಲಯದ ಸಲಹಾ ಮಂಡಳಿ ಸಭೆಯ ಎದುರು ಪ್ರಸ್ತಾಪಿಸಲಾಗಿತ್ತು. ***"ಮಂಡಳಿಯು ಈ ಕುರಿತು ಚರ್ಚಿಸಿ ಒಂದು ಬಾರಿಗೆ ಮಾತ್ರ ಶೋಧಗಂಗಾ format ಗಾಗಿ CD ಯನ್ನು ಪರಿಶೀಲಿಸಲು ಅನುಮತಿಸಿತು ಮತ್ತು ಈ ಕುರಿತು ಎಲ್ಲ ವಿಭಾಗಗಳ ಮುಖ್ಯಸ್ಥರಿಗೆ ಸುತ್ತೋಲೆ ಮೂಲಕ ಸೂಚಿಸಲು ತಿಳಿಸಿತು."***

ಆದ್ದರಿಂದ ಸಂಶೋಧಕರು ತಮ್ಮ ಪಿಹೆಚ್.ಡಿ ಮಹಾಪ್ರಬಂಧದ ಸಿಡಿಯನ್ನು ಶೋಧಗಂಗಾ ನಮೂನೆಯಲ್ಲಿ ಪರಿಶೀಲಿಸಲು ಗ್ರಂಥಾಲಯಕ್ಕೆ ಸಲ್ಲಿಸುವ ಮುನ್ನ ಕುಲಂಕೂಷವಾಗಿ ಅವಲೋಕಿಸಿ ಸಂಬಂಧಿಸಿದ ಮಾರ್ಗದರ್ಶಕರ ಸಲಹೆಯಂತೆ ಅಂತಿಮವಾಗಿ ಪರಿಷ್ಕರಿಸಿ ಗ್ರಂಥಾಲಯಕ್ಕೆ ಒಂದು ಬಾರಿಗೆ ಮಾತ್ರ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ವಿಭಾಗದ ಮುಖ್ಯಸ್ಥರಿಗೆ ಈ ಮೂಲಕ ಸೂಚಿಸಲಾಗಿದೆ.

A. Channappa (signature)
**ಕುಲಸಚಿವರು**

**ಇವರಿಗೆ,**

**ಪ್ರತಿ:** **1) ಮುಖ್ಯಸ್ಥರು, ಎಲ್ಲ ವಿಷಯಗಳ ವಿಭಾಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.**
**2) ಉಪಕುಲಸಚಿವರು, ವಿದ್ಯಾವಿಷಯಕ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.**